# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 407 |
| 2) | ಸದಸ್ಯರ ಹೆಸರು | ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 15-12-2021 |
| 4) | ಉತ್ತರಿಸಬೇಕಾದ ಸಚಿವರು | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮೀನು ಸಾಗಾಣಿಕೆಗೆ ಪ್ರೋತ್ಸಾಹ ನೀಡಿ, ರೈತರಿಗೆ ಅನುಕೂಲವಾಗಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಯಾವ ಯೋಜನೆಗಳನ್ನು ರೂಪಿಸಿವೆ: (ಸಂಪೂರ್ಣ ಯೋಜನೆವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಮೀನು ಸಾಕಾಣಿಕೆಗಾಗಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸುವ ಸಲುವಾಗಿ ಹೊಸ ಮೀನು ಕೃಷಿ ಕೊಳ ನಿರ್ಮಾಣ ಮತ್ತು ಹೂಡಿಕೆ ವೆಚ್ಚ, ಹೊಸ ಮೀನು ನರ್ಸರಿ ಕೊಳಗಳ ನಿರ್ಮಾಣ ಮತ್ತು ಆಧುನಿಕ ಮೀನು ಕೃಷಿ ಪದ್ಧತಿಗಳಾದ RAS (Recirculatory Aquaculture System) ಮತ್ತು Biofloc ಮೀನು ಕೃಷಿಗೆ ಫಲಾನುಭವಿಗಳಿಗೆ ಸಹಾಯಧನ ನೀಡಲಾಗುತ್ತಿದೆ.<br><br>ಮೀನು ಸಾಗಾಣಿಕೆಗಾಗಿ ಸದರಿ ಯೋಜನೆಯಡಿ ಶಾಖನಿರೋಧಕ ವಾಹನ ಖರೀದಿಸಲು, ಶೀಥಲೀಕರಣ ವಾಹನ ಖರೀದಿಗೆ, ಐಸ್ ಬಾಕ್ಸ್‌ನೊಂದಿಗೆ ತ್ರಿಚಕ್ರ ವಾಹನ ಖರೀದಿಸಲು, ಐಸ್ ಬಾಕ್ಸ್‌ನೊಂದಿಗೆ ದ್ವಿಚಕ್ರ ವಾಹನ ಖರೀದಿಸಲು ಈ ಯೋಜನೆಯಡಿ ಸಹಾಯಧನ ನೀಡಲಾಗುತ್ತಿದೆ. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತದಲ್ಲಿ ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಸಹಾಯಧನ ನೀಡಲಾಗುತ್ತಿದೆ.<br><br>ಜಿಲ್ಲಾ ವಲಯ ಯೋಜನೆಯ ಮತ್ಸ್ಯವಾಹಿನಿ ಯೋಜನೆಯಡಿ ದ್ವಿಚಕ್ರ, ತ್ರಿಚಕ್ರ ಮತ್ತು ನಾಲ್ಕು ಚಕ್ರ ವಾಹನ ಖರೀದಿಗಾಗಿ ಅನುಕ್ರಮವಾಗಿ ರೂ.10 ಸಾವಿರ, 30 ಸಾವಿರ ಮತ್ತು 35 ಸಾವಿರ ಸಹಾಯಧನ ನೀಡಲಾಗುತ್ತಿದೆ. ಜಿಲ್ಲಾ ವಲಯದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣ ಮಾಡಲು ಸಹಾಯಧನ ನೀಡಲಾಗುತ್ತಿದೆ.<br><br>ಯೋಜನೆವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ಪ್ರಸ್ತುತ ಸರ್ಕಾರದಿಂದ ರೈತರಿಗೆ ನೀಡುತ್ತಿರುವ ಮೀನಿನ ತಳಿಗಳ ವಿಧಗಳಾವುವು; ಮತ್ತು ಈ ತಳಿಗಳಿಗಿರುವ ಮಾರಾಟದ ವ್ಯವಸ್ಥೆ ಯನ್ನು ವಿವರಿಸುವುದು:; (ಸಂಪೂರ್ಣ ವಿವರದೊಂದಿಗೆ ಮಾಹಿತಿ ನೀಡುವುದು) | ಸರ್ಕಾರದಿಂದ ರೈತರಿಗೆ ಕಾಟ್ಲಾ, ರೋಹು, ಮೃಗಾಲ್, ಹುಲ್ಲುಗೆಂಡೆ, ಸಾಮಾನ್ಯ ಗೆಂಡೆ ಮತ್ತು ಅಮೂರ್ ಕಾರ್ಪ್ ತಳಿಯ ಮೀನುಮರಿಗಳನ್ನು ಇಲಾಖಾ ಸ್ವಾಮ್ಯದ ಹಾಗೂ ಅನುಮೋದಿತ ಮೀನುಮರಿ ಉತ್ಪಾದನಾ ಕೇಂದ್ರ ಮತ್ತು ಪಾಲನಾ ಕೇಂದ್ರಗಳಿಂದ, ಇಲಾಖೆಯಿಂದ ಅನುಮೋದಿತ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.<br><br>ರಾಜ್ಯದಲ್ಲಿ ಇಲಾಖಾ ವ್ಯಾಪ್ತಿಯ ಒಟ್ಟು16 ಮೀನುಮರಿ ಉತ್ಪಾದನಾ ಕೇಂದ್ರ, 90 ಪಾಲನಾ ಕೇಂದ್ರ ಹಾಗೂ 220 ಇಲಾಖಾ ಅನುಮೋದಿತ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಮೀನುಮರಿ ಸರಬರಾಜು ಮಾಡಲಾಗುತ್ತಿದೆ.<br><br>ಮೀನುಮರಿ ಮಾರಾಟ ದರದ ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

| | | |
|---|---|---|
| ಇ) | ರಾಜ್ಯದ ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆಯಲ್ಲಿ ಕಾನೂನು ಪಾಲನೆ ಮಾಡದೇ ಮೀನುಗಾರಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಇವರ ವಿರುದ್ಧ ಯಾವ ಕ್ರಮಗಳನ್ನು ತೆಗೆದುಕೊಂಡಿದೆ; | ಹೌದು. ರಾಜ್ಯದ ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆಯಲ್ಲಿ ಕಾನೂನು ಪಾಲನೆ ಮಾಡದೇ ಇರುವವರ ವಿರುದ್ಧ KMFR Act 1986 ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ರೂ.37.9 ಲಕ್ಷ ದಂಡವನ್ನು ಕಾಯ್ದೆ ಉಲ್ಲಂಘಿಸಿದವರಿಂದ ವಸೂಲು ಮಾಡಿ ಸರ್ಕಾರಕ್ಕೆ ಭರಿಸಲಾಗಿದೆ. (ರೂ. ಲಕ್ಷಗಳಲ್ಲಿ) (see table below) |
| ಈ) | ಸಾಂಪ್ರದಾಯಿಕ ಮೀನುಗಾರಿಕೆಯನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಕರಾವಳಿ ಪ್ರದೇಶದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆಗಾಗಿ ಸಮುದ್ರದಲ್ಲಿ 5 ನಾಟಿಕಲ್ ಮೈಲ್ ವರೆಗಿನ ಪ್ರದೇಶವನ್ನು ಸಾಂಪ್ರದಾಯಿಕ ಮೀನುಗಾರಿಕೆಗಾಗಿ ಕಾಯ್ದಿರಿಸಲಾಗಿದೆ.<br><br>ಒಳನಾಡು ಪ್ರದೇಶದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆಯನ್ನು ಉತ್ತೇಜಿಸಲು ಮೀನುಗಾರರಿಗೆ ರಾಜ್ಯ ವಲಯ ಮತ್ತು ಜಿಲ್ಲಾವಲಯ ಯೋಜನೆಗಳಡಿ ಶೇಕಡಾ 100ರ ಸಹಾಯಧನದಲ್ಲಿ ಮೀನು ಸಲಕರಣೆ ಕಿಟ್ಟು ಮತ್ತು FRP ಹರಿಗೋಲುಗಳನ್ನು ನೀಡಲಾಗುತ್ತಿದೆ. |
| ಉ) | ಮೀನುಗಾರಿಕೆ ವ್ಯವಸ್ಥೆಯ ಶೇ.95 ಭಾಗವನ್ನು ಖಾಸಗಿಯವರ ಕೈಗೆ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ವ್ಯವಸ್ಥೆಯನ್ನು ಸರ್ಕಾರದ ವಶಕ್ಕೆ ತೆಗೆದು ಕೊಂಡು ಅಭಿವೃದ್ಧಿ ಪಡಿಸುವ ಯೋಜನೆ ಸರ್ಕಾರಕ್ಕೆ ಇದೆಯೇ? | ಮೀನುಗಾರಿಕೆ ಇಲಾಖೆಯಿಂದ ಯಾವುದೇ ಯೋಜನೆ/ಕಾರ್ಯಕ್ರಮಗಳನ್ನು ಖಾಸಗಿಕರಣಗೊಳಿಸಿರುವುದಿಲ್ಲ. ಇಲಾಖೆಯ ಎಲ್ಲಾ ಯೋಜನೆ/ಕಾರ್ಯಕ್ರಮಗಳನ್ನು ಅನುಮೋದಿತ ಕ್ರಿಯಾ ಯೋಜನೆಯಂತೆ ಅನುಷ್ಠಾನಗೊಳಿಸಲಾಗುತ್ತಿದೆ. |

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ | 2018-19 | 2019-20 | 2020-21 |
|---|---|---|---|---|
| 1 | ದಕ್ಷಿಣ ಕನ್ನಡ | 1.85 | 7.8 | 0.55 |
| 2 | ಉಡುಪಿ | 4.7 | 5.35 | 0.1 |
| 3 | ಉತ್ತರ ಕನ್ನಡ | 7.35 | 4.8 | 5.4 |
| | ಒಟ್ಟು | 13.9 | 17.95 | 6.05 |

ಸಂಖ್ಯೆ: ಪಸಂಮೀ ಇ-169 ಮೀಇಇ 2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಅನುಬಂಧ-01

# ಇಲಾಖೆಯಿಂದ ಮೀನು ಸಾಗಾಣಿಕೆ ಮತ್ತು ಸಾಕಾಣಿಕೆಗಾಗಿ ಇರುವ ಯೋಜನೆಗಳು

**1. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ**

a. "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲಾಗುತ್ತಿದೆ.

b. ರಾಜ್ಯದ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ ಮರಿಗಳನ್ನು ಬಿತ್ತನೆ ಮಾಡಲಾಗುತ್ತಿದೆ.

c. ಸರ್ಕಾರ ಸ್ವಾಮ್ಯದ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/- ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

d. ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸಿಗಡಿ ಮತ್ತು ಹಿನ್ನೀರು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು.

**2. ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ**

ರಾಜ್ಯದ ಆಯ್ದ ಜಲಾಶಯಗಳಲ್ಲಿ ಬೆರಳುದ್ದದ ಮೀನು ಮರಿ (Advanced fingerlings) ಬಿತ್ತನೆ ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬೆರಳುದ್ದದ ಮೀನುಮರಿಗಳನ್ನು ನೊಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುತ್ತಿದೆ.

**3. ನೀಲಿ ಕ್ರಾಂತಿ/ PMMSY – ಮೀನುಗಾರಿಕೆ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (ಕೇಂದ್ರ ಪುರಸ್ಕೃತ ಯೋಜನೆ)**

ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೊಜನೆಯಡಿ ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ಅಲಂಕಾರಿಕಾ ಮತ್ತು ಮನರಂಜನಾ ಮೀನುಗಾರಿಕೆ ಅಭಿವೃದ್ಧಿ, ನೂತನ ತಂತ್ರಜ್ಞಾನ ಅಳವಡಿಕೆ, ಹಿಡುವಳಿ ನಂತರದ ಶೀತಲ ಸರಪಳಿ ಮೂಲ ಸೌಕರ್ಯ, ಮೀನು ಆಹಾರ ತಯಾರಿಕಾ ಘಟಕ, ಮೀನುಮಾರುಕಟ್ಟೆಗಳು ಮತ್ತು ಮಾರಾಟ ಮೂಲ ಸೌಕರ್ಯ ಗಳಿಗೆ ಸಹಾಯಧನ ನೀಡಲಾಗುತ್ತಿದೆ. ಸದರಿ ಯೋಜನೆಯಡಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ.40 ರಷ್ಟು ಸಹಾಯಯಧನ ಹಾಗೂ ಮಹಿಳೆಯರು, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ. 60 ರಷ್ಟು ಸಹಾಯಯಧನವನ್ನು ನೀಡಲಾಗುತ್ತಿದೆ.

4. **ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ**

ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಸೇರಿದ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆ ಕಿಟ್ ಮತ್ತು ಫೈಬರ್ ಗ್ಲಾಸ್ ಹರಿಗೋಲು ವಿತರಣೆಗೆ ಅವಕಾಶ ಮಾಡಲಾಗಿದೆ.

5. **ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ**

a. ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಖರೀದಿಸಲು ಅವಕಾಶ ಮಾಡಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000 ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.

b. ಮೀನು ಮರಿಗಳನ್ನು ಹಿಡಿಯುವುದನ್ನು ತಪ್ಪಿಸಿ ಮತ್ಸ್ಯ ಸಂಪತ್ತನ್ನು ರಕ್ಷಿಸಲು ಮೀನುಗಾರರಿಗೆ ಕಾಡ್ ಎಂಡ್‌ನಲ್ಲಿ 35 ಎಂಎಂ ಸ್ಕ್ವೇರ್ ಮೆಶ್ ಬಲೆಗಳನ್ನು ಉಚಿತವಾಗಿ ನೀಡಲು ಉದ್ದೇಶಿಸಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000 ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.

ರಾಜ್ಯದ ಎಲ್ಲಾ ಒಳನಾಡು ಜಿಲ್ಲೆಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದ್ರಿ ಯೋಜನೆಯಡಿ ಒಂದು ಫೈಬರ್‌ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ಖರೀದಿಸಲು ಅವಕಾಶ ಮಾಡಲಾಗಿದೆ. ಇದರ ಘಟಕ ವೆಚ್ಚ ರೂ.10,000/- ಗಳಾಗಿದ್ದು ಶೇ.100 ರಷ್ಟು ಸಹಾಯಧನ ನೀಡಲಾಗುತ್ತಿದೆ.

1. **ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ**

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/- ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುತ್ತಿದೆ.

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

3. **ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ**

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.2000 ಸಹಾಯ ಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.10000/- ಗಳ ಸಹಾಯಧನವನ್ನು ನೀಡಲಾಗುತ್ತಿದೆ.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋ ರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30,000 ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.35,000 ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುತ್ತಿದೆ.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/- ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5000/- ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

## ಅನುಬಂಧ-1

| ಕ್ರಸಂ. | ಉಪ-ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯ ಕೇಂದ್ರ ಪುರಸ್ಕೃತ ಘಟಕಗಳ ಅಡಿಯಲ್ಲಿ ಫಲಾನುಭವಿ ಆಧಾರಿತ ಯೋಜನೆಗಳು | | | ಸಾಮಾನ್ಯ ವರ್ಗ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| ಅ) | ಉತ್ಪಾದನೆ ಮತ್ತು ಉತ್ಪಾದಕತೆಯ ವರ್ಧನೆಗೆ ಸಂಬಂಧಿಸಿದ ಯೋಜನೆಗಳು | | | | |
| 1 | ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ | | | | |
| 1.1 | ಸಿಹಿನೀರಿನ ಮೀನುಗಳ ಹ್ಯಾಚರಿ ಕೇಂದ್ರಗಳ ಸ್ಥಾಪನೆ | (ಸಂಖ್ಯೆ) | 25.00 | 10.00 | 15.00 |
| 1.2 | ಹೊಸ ಸಿಹಿನೀರಿನ ಸ್ಕ್ಯಾಂಪಿ ಹ್ಯಾಚರಿ ಕೇಂದ್ರಗಳ ಸ್ಥಾಪನೆ | (ಸಂಖ್ಯೆ) | 50.00 | 20.00 | 30.00 |
| 1.3 | ಹೊಸ ಪಾಲನೆ ಕೊಳಗಳ ನಿರ್ಮಾಣ (ನರ್ಸರಿ / ಮೀನುಮರಿ ಪಾಲನೆ ಕೊಳಗಳು) | (ಹೆ) | 7.00 | 2.80 | 4.20 |
| 1.4 | ಹೊಸ ಮೀನುಕೃಷಿ ಕೊಳಗಳ ನಿರ್ಮಾಣ | (ಹೆ) | 7.00 | 2.80 | 4.20 |
| 1.5 | ಸಮಗ್ರ ಮೀನು ಕೃಷಿ, ಸ್ಕ್ಯಾಂಪಿ, ಪಂಗಾಸಿಯಸ್, ತಿಲಾಪಿಯಾ ಸೇರಿದಂತೆ ಸಿಹಿ ನೀರಿನ ಜಲಕೃಷಿಗೆ ಹೂಡಿಕೆ ವೆಚ್ಚಗಳು | (ಹೆ) | 4.00 | 1.60 | 2.40 |
| 1.6 | ಅಗತ್ಯಕ್ಕೆ ಅನುಗುಣವಾಗಿ ಹೊಸ ಹಿನ್ನೀರು ಹ್ಯಾಚರಿ ಕೇಂದ್ರಗಳ ಸ್ಥಾಪನೆ | (ಸಂಖ್ಯೆ) | 50.00 | 20.00 | 30.00 |
| 1.7 | ಹಿನ್ನೀರು ಪ್ರದೇಶಗಳಲ್ಲಿ ಜಲಚರ ಸಾಕಣೆಗಾಗಿ ಹೊಸ ಕೊಳಗಳ ನಿರ್ಮಾಣ | (ಹೆ) | 8.00 | 3.20 | 4.80 |
| 1.8 | ಲವಣ / ಕ್ಷಾರೀಯ ಪ್ರದೇಶಗಳಿಗೆ ಹೊಸ ಕೊಳಗಳ ನಿರ್ಮಾಣ | (ಹೆ) | 8.00 | 3.20 | 4.80 |
| 1.9 | ಹಿನ್ನೀರು ಪ್ರದೇಶಗಳಲ್ಲಿ ಜಲಚರ ಸಾಕಣೆಗಾಗಿ ಹೂಡಿಕೆ ವೆಚ್ಚ | (ಹೆ) | 6.00 | 2.40 | 3.60 |
| 1.10 | ಲವಣ / ಕ್ಷಾರೀಯ ಪ್ರದೇಶಗಳಲ್ಲಿ ಮೀನು ಕೃಷಿಗೆ ಹೂಡಿಕೆ ವೆಚ್ಚ | (ಹೆ) | 6.00 | 2.40 | 3.60 |
| 1.11 | ಘಟಕವೆಚ್ಚದಲ್ಲಿ ರೂ 8 ಲಕ್ಷ ಹೂಡಿಕೆ ವೆಚ್ಚ ಸೇರಿದಂತೆ ಹಿನ್ನೀರು / ಲವಣ / ಕ್ಷಾರೀಯ ಪ್ರದೇಶಗಳಲ್ಲಿ ಬಯೋಫ್ಲೋಕ್ ಕೊಳಗಳ ನಿರ್ಮಾಣ | (ಹೆ) | 18.00 | 7.20 | 10.80 |

| | | | | | |
|---|---|---|---|---|---|
| 1.12 | ಸಿಹಿನೀರಿನ ಪ್ರದೇಶಗಳಿಗೆ ಬಯೋಫ್ಲೋಕ್ ಕೊಳಗಳ ನಿರ್ಮಾಣ, (ಹೆಕ್ಟೇರಿಗೆ 4 ಲಕ್ಷ ರೂ ಹೂಡಿಕೆ ವೆಚ್ಚ ಸೇರಿದಂತೆ) | (ಹೆ) | 14.00 | 5.60 | 8.40 |
| 1.13 | ಜಲಾಶಯಗಳಲ್ಲಿ ಬಲಿತ ಮೀನು ಮರಿಗಳ ದಾಸ್ತಾನು @ 1000 ಬಲಿತ ಬಿತ್ತನೆ ಮರಿ / (ಹೆ) (ರೂ 3.0 ಲಕ್ಷ / ಒಂದು ಲಕ್ಷ ಬಿತ್ತನೆ ಮರಿ) | ಒಂದು ಲಕ್ಷ ಬಿತ್ತನೆ ಮರಿ | 3.00 | 1.20 | 1.80 |
| 1.14 | ವೆಟ್‌ಲ್ಯಾಂಡ್ ಗಳಲ್ಲಿ ಬಲಿತ ಮೀನು ಮರಿಗಳ ದಾಸ್ತಾನು @ 1000 ಬಲಿತ ಬಿತ್ತನೆ ಮರಿ / (ಹೆ) (ರೂ 3.0 ಲಕ್ಷ / ಒಂದು ಲಕ್ಷ ಬಿತ್ತನೆ ಮರಿ) | ಒಂದು ಲಕ್ಷ ಬಿತ್ತನೆ ಮರಿ | 3.00 | 1.20 | 1.80 |
| 4 | ಅಲಂಕಾರಿಕ ಮತ್ತು ಮನರಂಜನಾ ಮೀನುಗಾರಿಕೆಯ ಅಭಿವೃದ್ಧಿ | | | | |
| 4.1 | ಹಿತ್ತಲಿನ ಅಲಂಕಾರಿಕ ಮೀನು ಸಾಕಾಣಿಕೆ ಘಟಕ (ಸಾಗರ ಮತ್ತು ಶುದ್ಧ ನೀರು ಎರಡೂ) | (ಸಂಖ್ಯೆ) | 3.00 | 1.20 | 1.80 |
| 4.2 | ಮಧ್ಯಮ ಪ್ರಮಾಣದ ಅಲಂಕಾರಿಕ ಮೀನು ಸಾಕಾಣಿಕೆ ಘಟಕ (ಸಾಗರ ಮತ್ತು ಸಿಹಿನೀರಿನ ಮೀನು) | (ಸಂಖ್ಯೆ) | 8.00 | 3.20 | 4.80 |
| 4.3 | ಸಮಗ್ರ ಅಲಂಕಾರಿಕ ಮೀನು ಘಟಕ (ಶುದ್ಧ ನೀರಿನ ಮೀನುಗಳಿಗೆ ಸಂತಾನೋತ್ಪತ್ತಿ ಮತ್ತು ಪಾಲನೆ) | (ಸಂಖ್ಯೆ) | 25.00 | 10.00 | 15.00 |
| 4.4 | ಸಮಗ್ರ ಅಲಂಕಾರಿಕ ಮೀನು ಘಟಕ (ಸಮುದ್ರ ಮೀನುಗಳ ಸಂತಾನೋತ್ಪತ್ತಿ ಮತ್ತು ಪಾಲನೆ) | (ಸಂಖ್ಯೆ) | 30.00 | 12.00 | 18.00 |
| 4.5 | ಸಿಹಿನೀರಿನ ಅಲಂಕಾರಿಕ ತಾಯಿಮೀನು ಬ್ಯಾಂಕ್ ಸ್ಥಾಪನೆ. | (ಸಂಖ್ಯೆ) | 100.00 | 40.00 | 60.00 |
| 4.6 | ಕ್ರೀಡಾ ಮೀನುಗಾರಿಕೆಯ ಪ್ರಚಾರ. | (ಸಂಖ್ಯೆ) | 50.00 | 20.00 | 30.00 |
| 5 | ತಂತ್ರಜ್ಞಾನದ ಅಳವಡಿಕೆ | | | | |
| 5.1 | ದೊಡ್ಡ ಆರ್‌ಎಎಸ್ ಸ್ಥಾಪನೆ (ಕನಿಷ್ಠ 90 ಮೀ 3 / ಟ್ಯಾಂಕ್ ಸಾಮರ್ಥ್ಯದ 8 ಟ್ಯಾಂಕ್‌ಗಳು 40 ಟನ್ / ಬೆಳೆ) / ಬಯೋಫ್ಲೋಕ್ (4 ಮೀ ದಿಯಾ 50 ಟ್ಯಾಂಕ್‌ಗಳು ಮತ್ತು 1.5 ಎತ್ತರದ) ಸಂಸ್ಕೃತಿ ವ್ಯವಸ್ಥೆ. | (ಸಂಖ್ಯೆ). | 50.00 | 20.00 | 30.00 |

| | | | | | |
|---|---|---|---|---|---|
| 5.2 | ಮಧ್ಯಮ ಆರ್‌ಎಎಸ್ ಸ್ಥಾಪನೆ (ಕನಿಷ್ಠ 30 ಮೀ 3 / ಟ್ಯಾಂಕ್ ಸಾಮರ್ಥ್ಯದ 10 ಟ್ಯಾಂಕ್ / ಬೆಳೆ 6 ಟ್ಯಾಂಕ್‌ನೊಂದಿಗೆ) / ಬಯೋಫ್ಲೋಕ್ ಸಂಸ್ಕೃತಿ ವ್ಯವಸ್ಥೆ (4 ಮೀ ಡಯಾ ಮತ್ತು 1. ಮೀ ಎತ್ತರದ 25 ಟ್ಯಾಂಕ್‌ಗಳು) | (ಸಂಖ್ಯೆ) | 25.00 | 10.00 | 15.00 |
| 5.3 | ಸಣ್ಣ RAS (100 ಮೀ 3 ಸಾಮರ್ಥ್ಯದ 1 ಟ್ಯಾಂಕ್ / ಬಯೋಫ್ಲೋಕ್ (4 ಮೀ ಡಯಾ ಮತ್ತು 1.5 ಎತ್ತರದ 7 ಟ್ಯಾಂಕ್‌ಗಳು) ಸಂಸ್ಕೃತಿ ವ್ಯವಸ್ಥೆಯನ್ನು ಸ್ಥಾಪಿಸುವುದು | (ಸಂಖ್ಯೆ) | 7.50 | 3.00 | 4.50 |
| 5.4 | ಬ್ಯಾಕ್ಯಾರ್ಡ್ ಮಿನಿ ಆರ್ ಎ ಎಸ್ ಘಟಕಗಳ ಸ್ಥಾಪನೆ | (ಸಂಖ್ಯೆ). | 0.50 | 0.20 | 0.30 |
| 5.5 | ಜಲಾಶಯಗಳಲ್ಲಿ ಪಂಜರಗಳ ಸ್ಥಾಪನೆ | (ಸಂಖ್ಯೆ). | 3.00 | 1.20 | 1.80 |
| 5.6 | ತೆರೆದ ಜಲಮೂಲಗಳಲ್ಲಿ ಪೆನ್ ನಿರ್ಮಿಸಿ ಮೀನುಕೃಷಿ | (ಹೆ). | 3.00 | 1.20 | 1.80 |
| ಆ) | ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು | | | | |
| 6 | ಹಿಡುವಳಿ ನಂತರದ ಮತ್ತು ಶೀತಲ ಸರಪಳಿ ಮೂಲಸೌಕರ್ಯ | | | | |
| 6.3 | ಶೈತ್ಯೀಕರಿಸಿದ ವಾಹನಗಳು | (ಸಂಖ್ಯೆ) | 25.00 | 10.00 | 15.00 |
| 6.4 | ಶಾಖ ನಿರೋಧಕ ವಾಹನಗಳು | (ಸಂಖ್ಯೆ) | 20.00 | 8.00 | 12.00 |
| 6.5 | ಐಸ್ ಬಾಕ್ಸ್‌ನೊಂದಿಗೆ ಮೋಟಾರ್ ಸೈಕಲ್ | (ಸಂಖ್ಯೆ) | 0.75 | 0.30 | 0.45 |
| 6.6 | ಐಸ್ ಪೆಟ್ಟಿಗೆಗಳೊಂದಿಗೆ ಸೈಕಲ್ | (ಸಂಖ್ಯೆ) | 0.10 | 0.04 | 0.06 |
| 6.7 | ಮೀನು ಮಾರಾಟಕ್ಕಾಗಿ ಇ-ರಿಕ್ಷಾಗಳನ್ನು ಒಳಗೊಂಡಂತೆ ಐಸ್ ಬಾಕ್ಸ್ ಹೊಂದಿರುವ ತ್ರಿಚಕ್ರ | (ಸಂಖ್ಯೆ) | 3.00 | 1.20 | 1.80 |
| 6.8 | ಜೀವಂತ ಮೀನು ಮಾರಾಟ ಕೇಂದ್ರಗಳು | (ಸಂಖ್ಯೆ) | 20.00 | 8.00 | 12.00 |
| 7 | ಮೀನು ಮಾರುಕಟ್ಟೆಗಳು ಮತ್ತು ಮಾರಾಟ ಮೂಲಸೌಕರ್ಯ | | | | |
| 7.1 | ಅಲಂಕಾರಿಕ ಮೀನು / ಅಕ್ವೇರಿಯಂ ಮಾರುಕಟ್ಟೆಗಳು ಸೇರಿದಂತೆ ಮೀನು ಚಿಲ್ಲರೆ ಮಾರುಕಟ್ಟೆಗಳ ನಿರ್ಮಾಣ. | (ಸಂಖ್ಯೆ) | 100.00 | 40.00 | 60.00 |
| 7.2 | ಅಕ್ವೇರಿಯಂ / ಅಲಂಕಾರಿಕ ಮೀನುಗಳ ಕಿಯೋಸ್ಕ್ ಸೇರಿದಂತೆ ಮೀನು ಕಿಯೋಸ್ಕ್‌ಗಳ ನಿರ್ಮಾಣ | (ಸಂಖ್ಯೆ) | 10.00 | 4.00 | 6.00 |
| 7.3 | ಮೀನು ಮೌಲ್ಯ ಉದ್ಯಮ ಉದ್ಯಮ ಘಟಕಗಳನ್ನು ಸೇರಿಸಿ | (ಸಂಖ್ಯೆ) | 50.00 | 20.00 | 30.00 |

| | | | | | |
|---|---|---|---|---|---|
| 7.4 | ಮೀನು ಮತ್ತು ಮೀನುಗಾರಿಕೆ ಉತ್ಪನ್ನಗಳ ಇ–ವ್ಯಾಪಾರ ಮತ್ತು ಇ–ಮಾರುಕಟ್ಟೆಗಾಗಿ ಇ–ವೇದಿಕೆ (ಯೋಜನಾವರದಿ ಆಧಾರಿಸಿ ಘಟಕ ವೆಚ್ಚ ನಿರ್ಧರಿಸಲಾಗುವುದು | | | | |
| 8 | ಆಳ ಸಮುದ್ರದ ಮೀನುಗಾರಿಕೆಯ ಅಭಿವೃದ್ಧಿ | | | | |
| 8.1 | ಸಾಂಪ್ರದಾಯಿಕ ಮೀನುಗಾರರಿಗೆ ಆಳ ಸಮುದ್ರ ಮೀನುಗಾರಿಕಾ ಹಡಗುಗಳನ್ನು ಸ್ವಾಧೀನಪಡಿಸಿಕೊಳ್ಳಲು ಬೆಂಬಲ | (ಸಂಖ್ಯೆ) | 120.00 | 48.00 | 72.00 |

---*---

ಅನುಬಂಧ-2

ಮೀನುಮರಿ ಮಾರಾಟ ದರದ ವಿವರ

| ಕ್ರಮ ಸಂ | ಮೀನುಮರಿ ವಿವರ | ಮೀನುಮರಿಗಳ ದರ |
|---|---|---|
| 1 | ಸ್ಪಾನ್(5 ಎಂ ಎಂ) | (ಪ್ರತಿ ಲಕ್ಷಗಳಲ್ಲಿ ರೂ) |
| | ಕಟ್ಲಾ | 1500.00 |
| | ರೋಹು | 1500.00 |
| | ಮೃಗಾಲ | 1500.00 |
| | ಸಾಮಾನ್ಯ ಗೆಂಡೆ | 1500.00 |
| | ಹುಲ್ಲುಗೆಂಡೆ/ಬೆಳ್ಳಿಗೆಂಡೆ | 4000.00 |
| 2 | ಫ್ರೈ(20 ಎಂ ಎಂ) | (ಪ್ರತಿ ಲಕ್ಷಗಳಲ್ಲಿ ರೂ) |
| | ಕಟ್ಲಾ | 12000.00 |
| | ರೋಹು | 9000.00 |
| | ಮೃಗಾಲ | 8000.00 |
| | ಸಾಮಾನ್ಯ ಗೆಂಡೆ | 8000.00 |
| | ಹುಲ್ಲುಗೆಂಡೆ/ಬೆಳ್ಳಿಗೆಂಡೆ | 18000.00 |
| 3 | ಫಿಂಗರ್ ಲಿಂಗ್ಸ(35 ಎಂ ಎಂ ರಿಂದ 40 ಎಂ ಎಂ ವರೆಗೆ) | (ಪ್ರತಿ ಸಾವಿರಕ್ಕೆ ರೂ) |
| | ಕಟ್ಲಾ | 400.00 |
| | ರೋಹು | 300.00 |
| | ಮೃಗಾಲ | 250.00 |
| | ಸಾಮಾನ್ಯ ಗೆಂಡೆ | 300.00 |
| | ಹುಲ್ಲುಗೆಂಡೆ/ಬೆಳ್ಳಿಗೆಂಡೆ | 500.00 |
| 4 | ದೊಡ್ಡಗಾತ್ರದ ಮೀನುಮರಿಗಳು(70 ಎಂ ಎಂ) | (ಪ್ರತಿ ಸಾವಿರಕ್ಕೆ ರೂ) |
| | ಕಟ್ಲಾ | 1500.00 |
| | ರೋಹು | 1200.00 |
| | ಮೃಗಾಲ | 1200.00 |
| | ಸಾಮಾನ್ಯ ಗೆಂಡೆ | 1200.00 |
| | ಹುಲ್ಲುಗೆಂಡೆ/ಬೆಳ್ಳಿಗೆಂಡೆ | 1500.00 |

**